ಬೆಂಗಳೂರು-ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಪ್ರದೇಶ ಯೋಜನಾ ಪ್ರಾಧಿಕಾರ
Bangalore Mysore Infrastructure Corridor Area Planning Authority

2ನೇ ಮಹಡಿ, ಗೇಟ್ ನಂ. 4, ಬಹುಮಹಡಿಗಳ ಕಟ್ಟಡ
ಡಾ||ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು – 560 001
ಫೋನ್ : 080–22341230 ಫ್ಯಾಕ್ಸ್ : 080 – 22389519

Second Floor, Gate No. 4, M.S. Buildings
Dr. B.R. Ambedkar Veedhi, Bangalore - 560 001
Tel : 080 - 22341230 Fax : 080 - 22389519

ಸಂಖ್ಯೆ: ಬಿಎಂಐಸಿಎಪಿಎ/68/ಪ್ರಾಪ್ರಪ/1730/2012–13 ದಿನಾಂಕ:09.12.2014

## ಪ್ರಾರಂಭಿಕ ಪ್ರಮಾಣ ಪತ್ರ

### (ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 15(1)ರನ್ವಯ)

ವಿಷಯ: ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ, ಹೊಸಕೆರೆಹಳ್ಳಿ ಗ್ರಾಮದ ಸ.ನಂ. 40/1 ರಿಂದ 40/8, 41/1ರಿಂದ 41/10, 42/3 ರಿಂದ 42/6, 42/8, 42/9, 42/14 ರಿಂದ 42/17, ರ ಜಮೀನುಗಳಲ್ಲಿ ಬಹುಮಹಡಿಗಳ ವಸತಿ ಅಪಾರ್ಟ್‌ಮೆಂಟ್ ಕಟ್ಟಡ ಕಟ್ಟಲು ಪ್ರಾರಂಭಿಕ ಪ್ರಮಾಣ ಪತ್ರ ಕೋರಿರುವ ಬಗ್ಗೆ.

ಉಲ್ಲೇಖ:
1. ಅರ್ಜಿದಾರರ ಮರು ಮನವಿ ದಿ:09.01.2014.
2. ದಿಃ11.02.2014ರಂದು ಜರುಗಿದ ಪ್ರಾಧಿಕಾರದ 39ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆಃ(39.9.3)ರ ತೀರ್ಮಾನ.
3. ಈ ಕಛೇರಿ ಸಮಸಂಖ್ಯೆ ಪತ್ರದ ದಿನಾಂಕಃ26.02.2014
4. ಅರ್ಜಿದಾರರ ಪತ್ರದ ದಿನಾಂಕ:20.08.2014
5. ಈ ಕಛೇರಿಯ ಸಮಸಂಖ್ಯೆ ಪತ್ರದ ದಿನಾಂಕಃ28.10.2014
6. ಅರ್ಜಿದಾರರು ದಿನಾಂಕ:20.11.2014ರಂದು ಆಕ್ಸಿಸ್ ಬ್ಯಾಂಕ್, ಬೆಂಗಳೂರು ಶಾಖೆ, ಬೆಂಗಳೂರು ರಲ್ಲಿ ಡಿ.ಡಿ. ಸಂ. 454914ರಲ್ಲಿ ರೂ. 1,38,000/–ಗಳ ಡಿ.ಡಿಯನ್ನು ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ.

*****

ವಿಷಯಕ್ಕೆ ಸಂಬಂಧಪಟ್ಟಂತೆ ಉಲ್ಲೇಖ (1)ರ ಪತ್ರದಲ್ಲಿ ಮೆ||ಶೋಭಾ ಡೆವಲಪರ್ಸ್ ಸಂಸ್ಥೆಯ ಪರವಾಗಿ ರು ಶ್ರೀ ಎನ್.ಬಿ.ಅಶೋಕ್‌ಕುಮಾರ್ ಇವರು ತಮ್ಮ ಮನವಿಯಲ್ಲಿ ಈ ಹಿಂದೆ ಅಂದರೆ ದಿನಾಂಕ:28.06.2013ರ ಮರು ಮನವಿಯಲ್ಲಿ ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ, ಹೊಸಕೆರೆಹಳ್ಳಿ ಗ್ರಾಮದ ಸ.ನಂ.35/3, 4, 37/1, 2, 38/1ರಿಂದ 5, 40/1 ರಿಂದ 40/8, 41/1ರಿಂದ 41/10, 42/3 ರಿಂದ 42/6, 42/8, 42/9, 42/14 ರಿಂದ 42/17, 48/6,7,8, 79, 80/1,2,3 ರ ಜಮೀನುಗಳಲ್ಲಿ ವಸತಿ ಅಪಾರ್ಟ್‌ಮೆಂಟ್ ಕಟ್ಟಡ ಕಟ್ಟಲು ಅನುಮೋದನೆ ಕೋರಿ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಈಗ ಪೂರ್ಣ ಜಮೀನುಗಳಲ್ಲಿ ಒಂದೇ ಬಾರಿಗೆ ಅಭಿವೃದ್ಧಿಪಡಿಸಲು ಸಾಧ್ಯವಾಗದ ಕಾರಣ ಸ.ನಂ40/1 ರಿಂದ 40/8, 41/1ರಿಂದ 41/10, 42/3 ರಿಂದ 42/6, 42/8, 42/9, 42/14 ರಿಂದ 42/17ರ ಜಮೀನುಗಳಿಗೆ ಮಾತ್ರ ಯೋಜನೆಯನ್ನು ಸೀಮಿತಗೊಳಿಸಿ ಅದಕ್ಕನುಗುಣವಾಗಿ ತಯಾರಿಸಿದ ನಕ್ಷೆಗಳನ್ನು ನಕ್ಷೆಗಳೊಂದಿಗೆ ಮನವಿ ಸಲ್ಲಿಸಿ ಅನುಮೋದನೆ ನೀಡಲು ಕೋರಿರುತ್ತಾರೆ.

ಪ್ರಸ್ತಾವನೆ ಬಗ್ಗೆ ಪರಿಶೀಲಿಸಲಾಗಿ, ಸದರಿ ಜಮೀನುಗಳನ್ನು ಸರ್ಕಾರದಿಂದ ಅನುಮೋದನೆಗೊಂಡ ಮಹಾಯೋಜನೆಯಲ್ಲಿ ವಸತಿ ವಲಯವೆಂದು ವರ್ಗೀಕರಿಸಿರುವ ಭೂ ಉಪಯೋಗದಲ್ಲಿ ಬರುತ್ತಿದೆ. ಸದರಿ ಜಮೀನನ್ನು ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆರವರು ವಿವಿಧ ಆದೇಶಗಳಲ್ಲಿ ವಸತಿ ಉದ್ದೇಶಕ್ಕಾಗಿ ಭೂ ಪರಿವರ್ತನೆ ಮಾಡಿರುತ್ತಾರೆ.

.....2

**ವಿಶೇಷ ಭೂಸ್ವಾಧೀನಾಧಿಕಾರಿಗಳು-1, ಕೆಐಎಡಿಬಿ, (ಬಿಎಂಐಸಿಪಿ) ರವರ ಪತ್ರ ಸಂಖ್ಯೆ** ಬಿಎಂಐಸಿಪಿ/ಎಲ್ಎಕ್ಯೂ(1)/ಸಿಆರ್/343/2013-14, ದಿಃ04.02.2014 ರ ಪತ್ರದಲ್ಲಿ ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ, ಹೊಸಕೆರೆಹಳ್ಳಿ ಗ್ರಾಮದ ಸ.ನಂ. 40/1 ರಿಂದ 40/8, 41/1ರಿಂದ 41/10, 42/3 ರಿಂದ 42/6, 42/8,9 ಮತ್ತು 42/14 ರಿಂದ 17 ರವರೆಗಿನ **ಜಮೀನುಗಳನ್ನು ಈ ತಹಲ್‌ವರೆವಿಗೂ ಬಿಎಂಐಸಿ ಯೋಜನೆಗಾಗಿ ಭೂಸ್ವಾಧೀನಪಡಿಸಿಕೊಂಡಿರುವುದಿಲ್ಲ ಎಂದು ತಿಳಿಸಿರುತ್ತಾರೆ.**

**ವಿಶೇಷ ಭೂಸ್ವಾಧೀನಾಧಿಕಾರಿಗಳು -2, ಕೆಐಎಡಿಬಿ ರವರ ಪತ್ರದ** ಸಂಖ್ಯೆಃ ಬೆಂಗಳೂರು/ವಿಭೂಸ್ವಾಅ/ 3771/2013-14, ದಿಃ04.02.2014ರ ಪತ್ರದಲ್ಲಿ ಸರ್ಕಾರದ ಅಧಿಸೂಚನೆ ಸಂಖ್ಯೆ ಸಿಐ 158/ಎಸ್‌ಪಿಕ್ಯೂ/2005, ದಿಃ08.06.2005ರಂತೆ ಈ ಕಛೇರಿ ವ್ಯಾಪ್ತಿಯಿಂದ ಭೂಸ್ವಾಧೀನಕ್ಕೆ ಒಳಪಟ್ಟಿರುವುದಿಲ್ಲ ಹಾಗೂ **ಈ ತಹಲ್‌ವರೆವಿಗೂ ಭೂಸ್ವಾಧೀನಕ್ಕೆ ಒಳಪಟ್ಟಿರುವುದಿಲ್ಲವೆಂದು ತಿಳಿಸಿರುತ್ತಾರೆ.**

ಪ್ರಸ್ತಾವನೆಯನ್ನು ಉಲ್ಲೇಖ (2)ರ ಪ್ರಾಧಿಕಾರದ 39 ನೇ ಸಭೆಯಲ್ಲಿ ಮಂಡಿಸಿ ಚರ್ಚಿಸಲಾಗಿ, ಸಭೆಯು *"ಟಿಪ್ಪಣಿಯಲ್ಲಿನ ಅಂಶಗಳ ಕುರಿತು ಸಭೆಯಲ್ಲಿ ಚರ್ಚಿಸಲಾಗಿ, ಪ್ರಸ್ತಾವನೆಯಲ್ಲಿನ ಸರ್ವೆ ನಂ. 40/1 ರಿಂದ 40/8ರವರೆಗಿನ ಭೂಮಾಲೀಕರಾದ ಶ್ರೀಮತಿ. ಗೌರಮ್ಮನವರು ಮೆ॥ ಶೋಭ ಡೆವಲಪರ್ಸ್ ಸಂಸ್ಥೆಯ ಜೊತೆ ಜಂಟಿ ಅಭಿವೃದ್ಧಿಗೆ ಕರಾರು ಮಾಡಿಕೊಂಡಿದ್ದು ತಮ್ಮ ಪರವಾಗಿ ಅನುಮೋದನೆ ಪಡೆಯಲು ಮೆ॥ ಶೋಭಾ ಡೆವಲಪರ್ಸ್ ಲಿ., ಸಂಸ್ಥೆಗೆ ನೊಂದಾಯಿತ ಜಿ.ಪಿ.ಎ ಅನ್ನು ನೀಡಿರುತ್ತಾರೆ. ಶೋಭಾ ಡೆವಲಪರ್ಸ್ ಸಂಸ್ಥೆಯು ತಮ್ಮ ಸಂಸ್ಥೆಯ ಮಾಲೀಕತ್ವದಲ್ಲಿರುವ ಸರ್ವೆ ನಂ.40/1 ರಿಂದ 40/10 ಮತ್ತು 42/3 ರಿಂದ 42/6,8,9,14,15,16,17 ಜಮೀನುಗಳನ್ನು ಶ್ರೀಮತಿ. ಗೌರಮ್ಮನವರ ಜಮೀನಿನೊಂದಿಗೆ ಸೇರಿಸಿ ಒಟ್ಟಾರೆಯಾಗಿ ಅಭಿವೃದ್ಧಿ ಪಡಿಸಲು ದಿಃ16.01.2013 ರಂದು ಪ್ರಾಧಿಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುವುದನ್ನು ಸಭೆಯು ಗಮನಿಸಿತು.*

*ಅರ್ಜಿದಾರರು ಸಲ್ಲಿಸಿರುವ ಪರಿಷ್ಕೃತ ಪ್ರಸ್ತಾವನೆಯಲ್ಲಿನ ಜಮೀನುಗಳು ಮಹಾಯೋಜನೆಯಲ್ಲಿ ವಸತಿ ವಲಯದಲ್ಲಿದ್ದು, ಕಂದಾಯ ಇಲಾಖೆಯಿಂದ ಭೂ ಪರಿವರ್ತನೆ ಆಗಿದ್ದು, ಕೆಐಎಡಿಬಿನಿಂದ ಪ್ರಶ್ನಿತ ಜಮೀನು ಮಂಡಳಿ ವತಿಯಿಂದ ಯಾವುದೇ ಯೊಜನೆಗೆ ಈವರೆವಿಗೂ ಅಧಿಸೂಚನೆಗೆ ಆಗಿರುವುದಿಲ್ಲವೆಂದು ಲಿಖಿತವಾಗಿ ನಿರಾಕ್ಷೇಪಣಾ ಪತ್ರವನ್ನು ನೀಡಲಾಗಿದೆ. ಸಭೆಯಲ್ಲಿ ಕೆಐಎಡಿಬಿಯ ಕಾರ್ಯ ನಿರ್ವಾಹಕ ಸದಸ್ಯರ ಪರವಾಗಿ ಹಾಜರಿದ್ದ ವಿಶೇಷ ಜಿಲ್ಲಾಧಿಕಾರಿಗಳು ಮಂಡಳಿ ವತಿಯಿಂದ ಪ್ರಸ್ತಾವನೆಗೆ ಸಂಬಂಧಿಸಿದಂತೆ ಯಾವುದೇ ಆಕ್ಷೇಪಣೆ ಇರುವುದಿಲ್ಲವೆಂದು ತಿಳಿಸಿದರು. ದಾಖಲೆಗಳಂತೆ ಜಮೀನಿನ ಒಟ್ಟು ವಿಸ್ತೀರ್ಣವು 328 ಗುಂಟೆ ಇದ್ದರೂ ಸಹ ಧೃಢೀಕೃತ ಸರ್ವೆ ಸ್ಕೆಚ್ ನಂತೆ 313 ಗುಂಟೆ ಇದ್ದು, ಅದರಲ್ಲಿ 13 ಗುಂಟೆ ಖರಾಬ್ ಪ್ರದೇಶವನ್ನು ಮತ್ತು ಸ್ಥಳದಲ್ಲಿ ನೈಜವಾಗಿ 13ಗುಂಟೆ ಪ್ರದೇಶವು ಒತ್ತುವರಿಯಾಗಿ ಈಗ ಲಭ್ಯವಿಲ್ಲದೇ ಇರುವುದರಿಂದ, ಅವುಗಳನ್ನು (ಒಟ್ಟು 26ಗುಂಟೆ) ಹೊರತುಪಡಿಸಿ ಲಭ್ಯವಿರುವ ವಿಸ್ತೀರ್ಣಕ್ಕೆ ಅಂದರೆ (313-13-13)=287 ಗುಂಟೆ (07ಎ-07ಗುಂಟೆ) ಪ್ರದೇಶಕ್ಕೆ ಮಾತ್ರ ನಿವೇಶನದ ವಿಸ್ತೀರ್ಣವನ್ನು ಸೀಮಿತಗೊಳಿಸಲಾಗಿದೆ.*

*ಪ್ರಶ್ನಿತ ಜಮೀನಿಗೆ ಹೊಂದಿಕೊಂಡಂತೆ ಅರ್ಜಿದಾರರ ಮಾಲೀಕತ್ವದಲ್ಲೇ (ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧಿಕಾರ ವ್ಯಾಪ್ತಿಯಲ್ಲಿ) ಇರುವ ಸರ್ವೆ ನಂ. 48/6, 48/7, 48/8ರ ಜಮೀನಿನಲ್ಲಿ ಹಾದು ಹೋಗಿರುವ 2.2 ಮೀ ಅಗಲದ ನಕಾಶೆ ಕಾಲುದಾರಿಯನ್ನು 12.2 ಮೀ ಗೆ ವಿಸ್ತರಿಸಿ ಹಾಲಿ ಇರುವ 12.2 ಮೀ ಅಗಲದ ಸಾರ್ವಜನಿಕ ರಸ್ತೆಗೆ ಸಂಪರ್ಕ ಕಲ್ಪಿಸಿರುವುದನ್ನು ಹಾಗೂ ವಲಯ ನಿಯಮಾವಳಿಗಳ ಪ್ರಕಾರ ನಕ್ಷೆಗಳನ್ನು ತಯಾರಿಸಿ*

.....3

ವಿವಿಧ ಇಲಾಖೆಗಳಿಂದ ನಿರಾಕ್ಷೇಪಣಾ ಪತ್ರಗಳನ್ನು ಪಡೆದು ಸಲ್ಲಿಸಿದ್ದು, ಪ್ರಸ್ತಾವನೆಯು ನಿಯಮಾವಳಿಗಳಿಗೆ ಪೂರಕವಾಗಿರುವುದನ್ನು ಗಮನಿಸಿ, ಅಗ್ನಿ ಶಾಮಕ ಇಲಾಖೆಯಿಂದ ಪರಿಷ್ಕೃತ ಪ್ರಸ್ತಾವನೆಯಲ್ಲಿನ ಕಟ್ಟಡ ನಕ್ಷೆಗಳಿಗೆ ಅನುಗುಣವಾಗಿ ಪರಿಷ್ಕೃತ ನಿರಾಕ್ಷೇಪಣಾ ಪತ್ರ ಪಡೆದು ಸಲ್ಲಿಸಿದ ನಂತರ ಕೆಳಕಂಡ ಷರತ್ತುಗಳೊಂದಿಗೆ ಪ್ರಾರಂಭಿಕ ಪ್ರಮಾಣ ಪತ್ರವನ್ನು ನೀಡಲು ತೀರ್ಮಾನಿಸಲಾಯಿತು".

ಪ್ರಾಧಿಕಾರದ ತೀರ್ಮಾನದನ್ವಯ ಅರ್ಜಿದಾರರಿಗೆ ಉಲ್ಲೇಖ(3)ರ ಪತ್ರದಲ್ಲಿ ಪರಿಷ್ಕೃತ ಅಗ್ನಿಶಾಮಕ ಇಲಾಖೆಯಿಂದ ಪರಿಷ್ಕೃತ ನಿರಾಕ್ಷೇಪಣಾ ಪತ್ರ ಪಡೆದು ಸಲ್ಲಿಸಲು ತಿಳಿಸಲಾಗಿತ್ತು. ಸದರಿಯವರು ಉಲ್ಲೇಖ(4)ರ ಪತ್ರದಲ್ಲಿ ಪರಿಷ್ಕೃತ ನಿರಾಕ್ಷೇಪನಾ ಪತ್ರವನ್ನು ಪಡೆದು ಸಲ್ಲಿಸಿರುತ್ತಾರೆ. ಆದ ಕಾರಣ ನಿಗಧಿತ ಶುಲ್ಕಗಳನ್ನು ಪಾವತಿಸಲು ಉಲ್ಲೇಖ(5)ರಲ್ಲಿ ತಿಳಿಸಿದ ಮೇರೆಗೆ ಉಲ್ಲೇಖ (6)ರಲ್ಲಿ ಅರ್ಜಿದಾರರು ಶುಲ್ಕವನ್ನು ಪಾವತಿಸಿರುತ್ತಾರೆ.

ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ, ಹೊಸಕೆರೆಹಳ್ಳಿ ಗ್ರಾಮದ ಸ.ನಂ. 40/1 ರಿಂದ 40/8, 41/1ರಿಂದ 41/10, 42/3 ರಿಂದ 42/6, 42/8, 42/9, 42/14 ರಿಂದ 42/17, ರಲ್ಲಿ ಒಟ್ಟು 07 ಎಕರೆ-07ಗುಂಟೆ ಲಭ್ಯವಿರುವ ವಿಸ್ತೀರ್ಣದಲ್ಲಿ 2ತಳ+ನೆಲ+13 ಮಹಡಿಗಳ ಒಟ್ಟು 312 ವಸತಿ ಘಟಕಗಳ ಬಹುಮಹಡಿ ವಸತಿ ಅಪಾರ್ಟ್‌ಮೆಂಟ್ ಕಟ್ಟಡ ಮತ್ತು 2ತಳ+ನೆಲ+2ಮಹಡಿಗಳ ಅಮಿನಿಟೀಸ್ ಕಟ್ಟಡ ನಿರ್ಮಾಣ ಮಾಡಲು ಕೆಟಿಸಿಪಿ ಕಾಯ್ದೆ, 1961ರ ಕಲಂ 15(1) ರಡಿಯಲ್ಲಿ ಕೆಳಕಂಡ ತಾಂತ್ರಿಕ ವಿವರಗಳೊಂದಿಗೆ ಮತ್ತು ಷರತ್ತುಗಳೊಂದಿಗೆ ಪ್ರಾರಂಭಿಕ ಪ್ರಮಾಣ ಪತ್ರವನ್ನು ನೀಡಲಾಗಿದೆ.

| ಕ್ರ ಸಂ | ವಿವರಗಳು | ವಲಯ ನಿಯಮಾವಳಿಯಂತೆ | ಸಲ್ಲಿಸಿರುವ ನಕ್ಷೆಯಂತೆ | ಷರಾ |
|---|---|---|---|---|
| 1. | **ಭೂ ಉಪಯೋಗ**<br>1. ಮಹಾಯೋಜನೆಯಂತೆ<br>2. ಭೂ ಪರಿವರ್ತನೆ ಆದೇಶದಂತೆ | <br>ವಸತಿ<br>ವಸತಿ | <br>ವಸತಿ<br>ವಸತಿ | |
| 2. | ನಡು ಜಾಗಗಳು | ಸುತ್ತಲೂ 13 ಮೀ | ಸುತ್ತಲೂ 13 ಮೀ | |
| 3. | ನಿವೇಶನದ ವಿಸ್ತೀರ್ಣ | 4,000 ಚ.ಮೀಗಿಂತ ಹೆಚ್ಚು | 29,038 ಚ.ಮೀ | |
| 4. | ಆವರಿಸುವಿಕೆ | 50% | 22.25% | |
| 5. | ಅನುಪಾತ | 1.5 | 1.466 | |
| | | | | |
| 6. | ವಸತಿ ಘಟಕಗಳ ಸಂಖ್ಯೆ | - | 312 | |
| 7. | ಕಟ್ಟಡದ ಎತ್ತರ | 40 ರಿಂದ 45ಮೀ | 43.35ಮೀ | |
| 8. | ವಾಹನ ನಿಲುಗಡೆ | 395 ಕಾರುಗಳು | 476 ಕಾರುಗಳು | |

....4

1. ಸದರಿ ಪ್ರಸ್ತಾವನೆಯಲ್ಲಿ ಪೂರ್ವದಿಂದ ಪಶ್ಚಿಮಕ್ಕೆ ಸರ್ವೆ ನಂ.41 ಮತ್ತು 42ರ ಜಮೀನುಗಳಲ್ಲಿ ಹಾದು ಹೋಗುವ ನಾಲಾ ಪ್ರದೇಶವನ್ನು ಒತ್ತುವರಿ ಮಾಡದೆ ನೀರಿನ ಸರಾಗ ಹರಿಯುವಿಕೆಗೆ ತೊಂದರೆಯಾಗದಂತೆ ಅಭಿವೃದ್ಧಿ ಪಡಿಸತಕ್ಕದ್ದು.
2. ಪ್ರಾಧಿಕಾರದಿಂದ ನಕ್ಷೆ ಮಂಜೂರಾತಿಯ ಪ್ರಾರಂಭಿಕ ಪ್ರಮಾಣ ಪಡೆದ ನಂತರ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ಕಟ್ಟಡ ಪರವಾನಿಗೆ / ಲೈಸೆನ್ಸ್ ಪಡೆಯತಕ್ಕದ್ದು.
3. ನಿವೇಶನದಲ್ಲಿ ಮಳೆ ನೀರು ಕೊಯ್ಲಿನ ಸೂಕ್ತ ವ್ಯವಸ್ಥೆಯನ್ನು ಅಳವಡಿಸತಕ್ಕದ್ದು.
4. ಈ ಅನುಮತಿಯು ಪ್ರಾರಂಭಿಕ ಪ್ರಮಾಣ ಪತ್ರ ನೀಡಿದ ದಿನಾಂಕದಿಂದ ಎರಡು ವರ್ಷಗಳ ಅವಧಿಗೆ ಮಾತ್ರ ಜಾರಿಯಲ್ಲಿರುತ್ತದೆ. ತದನಂತರ, ನವೀಕರಣ ಬೇಕಾದಲ್ಲಿ ಅನುಮತಿ ಅವಧಿ ಮುಗಿಯುವ ಮೊದಲೇ ಈ ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸತಕ್ಕದ್ದು.
5. ಸಂಬಂಧಪಟ್ಟ ಪ್ರಾಧಿಕಾರ/ಸ್ಥಳೀಯ ಸಂಸ್ಥೆಯ ಸಿಬ್ಬಂದಿಗಳ ಪರಿಶೀಲನೆಗಾಗಿ ನಿವೇಶನ ಸ್ಥಳದಲ್ಲಿ ಅನುಮೋದಿತ ನಕ್ಷೆಯು ಸದಾಕಾಲ ಲಭ್ಯವಿರತಕ್ಕದ್ದು.
6. ಕಟ್ಟಡ ರಚನೆಯನ್ನು IS 1893–2002ರನ್ವಯ ಭೂಕಂಪ ನಿರೋದಕ ತಂತ್ರಜ್ಞಾನವನ್ನು ಬಳಸಿ ರಚಿಸುವುದರ ಜೊತೆಗೆ ಅದರಂತೆ ಕಾಮಗಾರಿಯನ್ನು ಕೈಗೊಳ್ಳತಕ್ಕದ್ದು.
7. ಈ ಪ್ರಸ್ತಾವಿತ ಕಟ್ಟಡ ನಕ್ಷೆ ಅನುಮೋದನೆಗೆ ಈಗಾಗಲೇ ವಿಧಿಸಿರುವ ಶುಲ್ಕಗಳಲ್ಲದೆ, ಸರ್ಕಾರವು ಆಗಿಂದಾಗ್ಗೆ ಹೊರಡಿಸಬಹುದಾದ ಆದೇಶಗಳಂತೆ ವಿಧಿಸಬಹುದಾದ ಶುಲ್ಕಗಳನ್ನು ~~ಅರ್ಜಿದಾರರು ಭರಿಸುವ ಷರತ್ತಿಗೆ~~ ಒಳಪಟ್ಟಿರುತ್ತದೆ.
8. ಅನುಮೋದಿತ ಕಟ್ಟಡ ನಕ್ಷೆಯಂತೆಯೇ ಕಟ್ಟಡವನ್ನು ನಿರ್ಮಿಸತಕ್ಕದ್ದು ಹಾಗೂ ಕಟ್ಟಡವನ್ನು ಅನುಮತಿ ನೀಡಲಾದ ಉಪಯೋಗಕ್ಕೆ ಮಾತ್ರವಲ್ಲದೆ ಬೇರೆ ಉದ್ದೇಶಗಳಿಗೆ ಉಪಯೋಗಿಸಬಾರದು.
9. ಇದು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರಡಿಯಲ್ಲಿ ಬಿ.ಎಂ.ಐ.ಸಿ.ಎ ಯೋಜನಾ ಪ್ರಾಧಿಕಾರದಿಂದ ಮಾತ್ರ ನೀಡಲಾದ ಪ್ರಾರಂಭಿಕ ಪ್ರಮಾಣ ಪತ್ರವಾಗಿರುತ್ತದೆ. ಇತರೆ ಕಾಯ್ದೆಗಳನ್ವಯ ಅವಶ್ಯವಿರುವ ಅನುಮತಿಯನ್ನು ಪಡೆಯದೆ ಯಾವುದೇ ಅಭಿವೃದ್ಧಿ ಕಾರ್ಯ ಕೈಗೊಳ್ಳತಕ್ಕದ್ದಲ್ಲ.
10. ಈ ಅನುಮತಿ ಕೋರಿ ಪ್ರಾಧಿಕಾರಕ್ಕೆ ಅರ್ಜಿದಾರರು ಸಲ್ಲಿಸಿರುವ ಮಾಹಿತಿಗಳು/ದಾಖಲೆಗಳು ಒಂದು ವೇಳೆ ತಪ್ಪು ಎಂದು ತಿಳಿದು ಬಂದಲ್ಲಿ ಹಾಗೂ ಜಮೀನಿಗೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ಏನಾದರೂ ದಾವೆಗಳಿದ್ದಲ್ಲಿ ಈ ಪ್ರಾರಂಭಿಕ ಪ್ರಮಾಣ ಪತ್ರವು ಅನೂರ್ಜಿತವಾಗಿದೆಯೆಂದು ಭಾವಿಸತಕ್ಕದ್ದು ಹಾಗೂ ಇದರಿಂದ ಉಂಟಾಗುವ ಆಗುಹೋಗುಗಳಿಗೆ ಈ ಪ್ರಾಧಿಕಾರವು ಹೊಣೆಯಾಗಿರುವುದಿಲ್ಲ.
11. ಕೆಪಿಸಿಬಿ. ಬಿಡಬ್ಲ್ಯೂಎಸ್‌ಎಸ್‌ಬಿ, ಅಗ್ನಿಶಾಮಕ ಇಲಾಖೆ, ಬೆಸ್ಕಾಂ, ಏರ್‌ಪೋರ್ಟ್ ಅಥಾರಿಟಿ, ಎಸ್‌ಇಐಎಎ, ಬಿಎಸ್‌ಎನ್‌ಎಲ್ ಸಂಸ್ಥೆಗಳಿಂದ ನೀಡಿರುವ ನಿರಾಕ್ಷೇಪಣಾ ಪತ್ರಗಳಲ್ಲಿ ವಿಧಿಸಿರುವ ಷರತ್ತುಗಳನ್ನು ಪಾಲಿಸತಕ್ಕದ್ದು.
12. ಪ್ರಸ್ತಾಪಿತ ಯೋಜನೆಯಲ್ಲಿನ ಎಲ್ಲಾ ವಸತಿ ಘಟಕಗಳಿಗೂ ಕುಡಿಯುವ ನೀರಿಗಾಗಿ ಮತ್ತು ಇತರೆ ಉಪಯೋಗದ ಬಳಕೆಗಾಗಿ ಪ್ರತ್ಯೇಕವಾದ ಜೋಡಿ ಕೊಳಾಯಿ ವ್ಯವಸ್ಥೆಯನ್ನು (Dual Piping System) ಅಳವಡಿಸತಕ್ಕದ್ದು.
13. ಸದರಿ ವಸತಿ ಯೋಜನೆಯಲ್ಲಿ ಉತ್ಪತ್ತಿಯಾಗುವ ಘನತ್ಯಾಜ್ಯ ವಸ್ತುಗಳ ವಿಲೇವಾರಿಗಾಗಿ ಸೂಕ್ತ ವ್ಯವಸ್ಥೆಯನ್ನು ಅಳಡಿಸತಕ್ಕದ್ದು.
14. ಈ ಪ್ರಾಧಿಕಾರದಿಂದ ದಿಃ07.03.2008 ಮತ್ತು 01.09.2008ರಲ್ಲಿ ಏಕ ನಿವೇಶನ ವಸತಿ ನಕ್ಷೆಗೆ ನೀಡಿರುವ ಅನುಮೋದನೆಯನ್ನು ರದ್ದುಗೊಳಿಸಲಾಗಿರುತ್ತದೆ.

....5

ಮೇಲಿನಂತೆ ನೀಡಲಾಗಿರುವ ಅನುಮತಿಗೆ ವ್ಯತಿರಕ್ತವಾಗಿ ಅಭಿವೃದ್ಧಿ ಕಾಮಗಾರಿಯನ್ನು ಕೈಗೊಂಡಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಸೆಕ್ಷನ್ 15(4)ರಂತೆ ಕ್ರಮ ಕೈಗೊಳ್ಳಲು ಪ್ರಾಧಿಕಾರಕ್ಕೆ ಅವಕಾಶ ಇರುವುದನ್ನು ತಮ್ಮ ಗಮನಕ್ಕೆ ತರಲಾಗಿದೆ.

ಸಹಿ/-
ನಗರ ಮತ್ತು ಗ್ರಾಮಾಂತರ ಯೋಜನಾ ಹೆಚ್ಚುವರಿ
ನಿರ್ದೇಶಕರು ಹಾಗೂ ಸದಸ್ಯ-ಕಾರ್ಯದರ್ಶಿಗಳು,
ಬಿ.ಎಂ.ಐ.ಸಿ.ಎ.ಪಿ.ಎ., ಬೆಂಗಳೂರು.

<u>ಪ್ರತಿಯನ್ನು:-</u>

1. ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು ಇವರಿಗೆ ಅನುಮೋದಿತ ಕಟ್ಟಡ ನಕ್ಷೆಯ 3 ಪ್ರತಿಗಳೊಂದಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಲಾಗಿದೆ.
2. ಆಯುಕ್ತರು/ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಇವರಿಗೆ ಸದರಿ ಯೋಜನೆಯಲ್ಲಿ ಬಿಡಿಎ ವ್ಯಾಪ್ತಿಯಲ್ಲಿ ಬರುವ ಹೊಸಕೆರೆಹಳ್ಳಿ ಗ್ರಾಮದ ಸ.ನಂ:48/5, 6, 8ರ ಜಮೀನುಗಳಲ್ಲಿ ಉಪಗಮನ ರಸ್ತೆ ಕಲ್ಪಿಸಿರುವುದರಿಂದ, ಸದರಿ ಜಮೀನುಗಳಲ್ಲಿ ಪ್ರಾಧಿಕಾರದಿಂದ ಅನುಮೋದನೆ ನೀಡುವ ಸಮಯದಲ್ಲಿ ರಸ್ತೆಗೆ ಕಾಯ್ದಿರಿಸಿರುವ ವಿಸ್ತೀರ್ಣವನ್ನು ಹೊರತುಪಡಿಸಿ ಅನುಮೋದನೆಗೆ ಪರಿಗಣಿಸಲು ಕೋರಲಾಗಿದೆ.
3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ಕಾರ್ಯನಿರ್ವಾಹಕ ಸದಸ್ಯರು, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ನೃಪತುಂಗ ರಸ್ತೆ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಕಳುಹಿಸಲಾಗಿದೆ.
4. ತಹಶೀಲ್ದಾರ್, ಬೆಂಗಳೂರು ಜಿಲ್ಲೆ ಇವರಿಗೆ ಮಾಹಿತಿಗಾಗಿ ಕಳುಹಿಸುತ್ತಾ, ಜಮೀನಿನ ಮಾಲೀಕತ್ವ, ಅಳತೆ ಮತ್ತು ಖರಾಬು ಇದ್ದಲ್ಲಿ ಅವುಗಳನ್ನು ಪರಿಶೀಲಿಸಿ ಧೃಢೀಕರಿಸಿಕೊಳ್ಳಲು ಹಾಗೂ ಅನುಮೋದಿತ ನಕ್ಷೆಯಲ್ಲಿ ಮೇಲ್ಕಂಡ ವಿಷಯಗಳಿಗೆ ಸಂಬಂಧಿಸಿದಂತೆ ಯಾವುದಾದರೂ ನ್ಯೂನ್ಯತೆಗಳು ಕಂಡು ಬಂದಲ್ಲಿ ಈ ಪ್ರಾರಂಭಿಕ ಪ್ರಮಾಣ ಪತ್ರವು ತಲುಪಿದ 15 ದಿನಗಳೊಳಗಾಗಿ ಸದರೀ ಮಾಹಿತಿಯನ್ನು ನೀಡಲು ಕೋರಲಾಗಿದೆ.
5. ಶ್ರೀ ಎನ್.ಬಿ.ಅಶೋಕ್‌ಕುಮಾರ್, Authorised Signatory, ಮೆ॥ಶೋಭಾ ಡೆವಲಪರ್ಸ್ ಲಿಮಿಟೆಡ್, ಸರ್ಜಾಪುರ-ಮಾರತ್‌ಹಳ್ಳಿ ಔಟರ್ ರಿಂಗ್ ರೋಡ್, ದೇವರ ಬೀಸನಹಳ್ಳಿ, ಬೆಳ್ಳಂದೂರು ಅಂಚೆ, ಬೆಂಗಳೂರು-103 ಇವರಿಗೆ ಅನುಮೋದಿತ ಕಟ್ಟಡ ನಕ್ಷೆಗಳೊಂದಿಗೆ ಕಳುಹಿಸಲಾಗಿದೆ.
6. ಕಛೇರಿ ಪ್ರತಿ.

9/12

ನಗರ ಮತ್ತು ಗ್ರಾಮಾಂತರ ಯೋಜನಾ ಹೆಚ್ಚುವರಿ
ನಿರ್ದೇಶಕರು ಹಾಗೂ ಸದಸ್ಯ-ಕಾರ್ಯದರ್ಶಿಗಳು,
ಬಿ.ಎಂ.ಐ.ಸಿ.ಎ.ಪಿ.ಎ., ಬೆಂಗಳೂರು.

12 /va p.p.pt clu